# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ: 05-03-2022 ರಂದು ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಡಾ॥ ಹರಿಪ್ರಿಯ, ವೈದ್ಯಾಧಿಕಾರಿಗಳು, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
4. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು,
5. ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ)
6. ಶ್ರೀ ಪ್ರಸನ್ನ, ಸದಸ್ಯರು, ಹೆಚ್.ಬಿ.ಆರ್ ಬಡಾವಣೆ ಅಸೋಸಿಯೇಷನ್(ರಿ)
7. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
2. ಶ್ರೀ ರಾಜೇಶ್, ಕಿರಿಯ ಆರೋಗ್ಯ ನಿರೀಕ್ಷಕರು,
3. ಕುಮಾರಿ ರಜನಿ, ಇಂಜಿನಿಯರ್, ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
4. ಮಾರ್ಷಲ್, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
5. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಸಂಚಾರ ಮತ್ತು ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ,
6. ಶ್ರೀ ಪುಟ್ಟಸ್ವಾಮಿ, ಬೆಸ್ಕಾಂ ಇಲಾಖೆ,
7. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ,
8. ಶ್ರೀ ವೆಂಕಟೇಶ್, ತೋಟಗಾರಿಕೆ ಇಲಾಖೆ,
9. ಶ್ರೀ ಶ್ರೀನಿವಾಸ್, ಪಶುವೈದ್ಯ ನಿರೀಕ್ಷಕರು,
10. ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ,

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯ ನಡವಳಿಗಳು**

1) **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)** ರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ರಸ್ತೆ ಬದಿಯ ಮರಗಳಲ್ಲಿ ಎಲೆಗಳು ಉದುರುತ್ತಿದ್ದು, ಗಾಳಿಗೆ ಹೋಗುತ್ತಿರುತ್ತಿರುತ್ತವೆ. ಇದನ್ನು ಶೀಘ್ರದಲ್ಲಿ ಶೇಖರಿಸಿ, ಉದ್ಯಾನವನಗಳಲ್ಲಿ ಸಂಗ್ರಹಿಸಿ, ಕಾಂಪೋಸ್ಟ್ ಮಾಡಬಹುದಾಗಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಹಾಜರಿದ್ದ ತೋಟಗಾರಿಕಾ ಇಲಾಖೆಯ ನಿರೀಕ್ಷಕರು ಮಾತನಾಡಿ, ಹಾಲೀ ಇರುವ ಎಲ್ಲಾ ಉದ್ಯಾನವನಗಳಲ್ಲಿ ಕಾಂಪೋಸ್ಟ್ ತಯಾರಿಕೆಗೆ ಕ್ರಮ ವಹಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು.



Scanned with CamScanner

2) ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ, ಎಂಪೈರ್ ಹೋಟೆಲ್ ಹತ್ತಿರ ಒಳಚರಂಡಿ ಚೇಂಬರ್ ಶಿಥಿಲಗೊಂಡಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಂಜಿನಿಯರ್ ರವರು ಶಿಥಿಲಗೊಂಡ ಮ್ಯಾನ್‌ಹೋಲ್‌ಗಳನ್ನು ದುರಸ್ತಿಪಡಿಸಲಾಗುವುದು ಎಂದು ಸಭೆಗೆ ತಿಳಿಸಿದರು.

3) ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ) ರವರು ಮಾತನಾಡಿ, ನೆಹರು ರಸ್ತೆಯಲ್ಲಿ ಬೀದಿ ದೀಪಗಳು ರಾತ್ರಿ ಹಗಲು ಉರಿಯುತ್ತಿರುವುದಾಗಿ ಸಭೆಗೆ ತಿಳಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಬೀದಿ ದೀಪಗಳ ವಿಭಾಗದ ಇಂಜಿನಿಯರ್ ರವರಿಗೆ ಕೂಡಲೇ ತಿಳಿಸಿ, ಕ್ರಮ ಕೈಗೊಳ್ಳಲು ಆದೇಶಿಸಿದರು.

4) ಶ್ರೀ ಪ್ರಸನ್ನ, ಸದಸ್ಯರು, ಹೆಚ್.ಬಿ.ಆರ್ ಬಡಾವಣೆ ಅಸೋಸಿಯೇಷನ್(ರಿ) ರವರು ಮಾತನಾಡಿ, ಇತ್ತೀಚೆಗೆ ವಾರ್ಡ್ ಪ್ರದೇಶದಲ್ಲಿ ಬೀದಿ ನಾಯಿಗಳ ಹಾವಳಿ ತಲೆದೋರಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಹಾಜರಿದ್ದ ಪಶು ಸಂಗೋಪನಾ ನಿರೀಕ್ಷಕರು ಮಾತನಾಡಿ, ಬೀದಿ ನಾಯಿಗಳನ್ನು ನಿಯಂತ್ರಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದಾಗಿ ಸಭೆಗೆ ಭರವಸೆ ನೀಡಿದರು ಮತ್ತು ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

5) ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ಹೆಚ್ಚು ಸಂಚಾರ ಇರುವ ರಸ್ತೆಗಳಲ್ಲಿ ವೈಜ್ಞಾನಿಕ ರಸ್ತೆ ಉಬ್ಬರಗಳನ್ನು ಅಳವಡಿಸಲು ಪ್ರಸ್ತಾಪಿಸಿದಾಗ, ಈ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು ಮತ್ತು ಈ ಬಗ್ಗೆ ಅನೇಕ ಬಾರಿ ಟ್ರಾಫಿಕ ಇಂಜಿನಿಯರಿಂಗ್ ಸೆಲ್ ರವರಿಗೆ ಅನೇಕ ಬಾರಿ ಪತ್ರ ಬರೆದರೂ ಸಹ ಈ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಮುಂದಿನ ಸಭೆಗೆ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರನ್ನು ಸಭೆಗೆ ಆಹ್ವಾನಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

6) ಡಾ॥ ಹರಿಪ್ರಿಯ, ವೈದ್ಯಾಧಿಕಾರಿಗಳು, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ ರವರು ಮಾತನಾಡಿ, ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ ಒಟ್ಟು 35 ಕೋವಿಡ್ ಸೋಂಕಿತ ಪ್ರಕರಣಗಳಿದ್ದು, ಈ ಪೈಕಿ 02 ಪ್ರಕರಣಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ ಹಾಗೂ ಆರ್.ಟಿ.ಪಿ.ಸಿ.ಆರ್ ಹಾಗೂ ರ್ಯಾಪಿಡ್ ಪರೀಕ್ಷೆಗಳನ್ನು ನಿರಂತರವಾಗಿ ಸಾರ್ವಜನಿಕರಿಗೆ ಒಟ್ಟು 58950 ಪರೀಕ್ಷೆಗಳನ್ನು ಮಾಡಲಾಗಿರುತ್ತದೆ. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು ವ್ಯಾಕ್ಸಿನೇಷನ್ 56710 ಜನರಿಗೆ ಲಸಿಕೆ ನೀಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

Prasanna Kumar .A
ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

ಪ್ರತಿಯನ್ನು

1) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.



Scanned with CamScanner